# ಕರ್ನಾಟಕ ಸರ್ಕಾರ – ಅರಣ್ಯ ಇಲಾಖೆ

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಹಾಗೂ ಆಯ್ಕೆ ಪ್ರಾಧಿಕಾರ**
**ಇವರ ಕಚೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು–560003**

## ಪ್ರಕಟಣೆ

**ಅಧಿಸೂಚನೆ ಸಂಖ್ಯೆ: ಬಿ9–ವಲಅ–ವಿವ–5/2014–15 ದಿನಾಂಕ 29–10–2014**

## ವಲಯ ಅರಣ್ಯಾಧಿಕಾರಿ ಹುದ್ದೆಗಳಿಗೆ ನೇರ ನೇಮಕಾತಿ

–0–

110 ವಲಯ ಅರಣ್ಯಾಧಿಕಾರಿ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಂಬಂಧ ಅನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ. ಅರ್ಜಿ ಶುಲ್ಕವನ್ನು ಅಂಚೆ ಕಚೇರಿಯಲ್ಲಿ ಪಾವತಿಸಿರುವ ಅಭ್ಯರ್ಥಿಗಳ ಪಟ್ಟಿಯನ್ನು ಇಲಾಖಾ ವೆಬ್‌ಸೈಟ್ www.aranya.gov.in ನಲ್ಲಿ ಪ್ರಕಟಿಸಲಾಗಿರುತ್ತದೆ. ಈ ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ಈ ಕೆಳಕಂಡ ದಿನಾಂಕಗಳಂದು ಮೂಲ ದಾಖಲೆಗಳ ಪರಿಶೀಲನೆ ಮತ್ತು ಪೂರ್ವಭಾವಿ ಪರೀಕ್ಷೆಗಳನ್ನು ನಡೆಸಲಾಗುವುದು. ಈ ಸಂಬಂಧ ಪ್ರವೇಶ ಪತ್ರವನ್ನು ದಿನಾಂಕ 2–2–2015 ರಿಂದ ಇಲಾಖಾ ವೆಬ್‌ಸೈಟ್‌ನಿಂದ ಅಭ್ಯರ್ಥಿಗಳು ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಲು ಸೂಚಿಸಲಾಗಿದೆ.

ಪೂರ್ವಭಾವಿ ಪರೀಕ್ಷೆಗಳಾದ ಸಾಮಾನ್ಯ ಜ್ಞಾನ ಮತ್ತು ಆಪ್ಟಿಟ್ಯೂಡ್ ಪರೀಕ್ಷೆಯು ವಸ್ತುನಿಷ್ಠ (objective) ಮಾದರಿಯದ್ದಾಗಿರುತ್ತದೆ. ಪ್ರತಿ ಪ್ರಶ್ನೆಗೆ 5 ಉತ್ತರಗಳನ್ನು ನೀಡಲಾಗಿರುತ್ತದೆ. ಪ್ರತೀ ಪ್ರಶ್ನೆಯ ಸರಿಯಾದ ಉತ್ತರಕ್ಕೆ 1 (ಒಂದು) ಅಂಕವನ್ನು ನೀಡಲಾಗುವುದು ಮತ್ತು ಪ್ರತೀ ಒಂದು ತಪ್ಪು ಉತ್ತರಕ್ಕೆ 0.25 ಅಂಕವನ್ನು ಕಳೆಯಲಾಗುವುದು.

| ಕ್ರ. ಸಂ. | ವಿಷಯಗಳು | ದಿನಾಂಕ | ಪರೀಕ್ಷೆ ನಡೆಯುವ ಅವಧಿ |
|---|---|---|---|
| 1 | ಮೂಲ ದಾಖಲೆಗಳ ಪರಿಶೀಲನೆ | 10–2–2015 ರಿಂದ 14–2–2015 ರವರೆಗೆ | ಪೂರ್ವಾಹ್ನ 8.00 ಗಂಟೆಯಿಂದ |
| 2 | ಸಾಮಾನ್ಯ ಜ್ಞಾನ | 15–2–2015 | ಪೂರ್ವಾಹ್ನ 10.00 ರಿಂದ 12.00 ಗಂಟೆ (2 ಗಂಟೆ ಅವಧಿ) |
| 3 | ಆಪ್ಟಿಟ್ಯೂಡ್ ಪರೀಕ್ಷೆ | 15–2–2015 | ಅಪರಾಹ್ನ 2.00 ರಿಂದ 4.00 ಗಂಟೆ (2 ಗಂಟೆ ಅವಧಿ) |

ಬೆಂಗಳೂರು,
ದಿನಾಂಕ: 22–1–2015

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ)
ಹಾಗೂ ಆಯ್ಕೆ ಪ್ರಾಧಿಕಾರ.